<u>ದಿನಾಂಕಃ 03.10.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ, ಪ್ರಮಾಣ ವಚನ ಬೋದಿಸಲಾಗಿದೆ</u>

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ.ಪಿ. ವಕೀಲರಿಂದಃ</u>

ಮಳವಳ್ಳಿ ತಾಲ್ಲೂಕಿನಲ್ಲಿ ಇರುವ ಮಿಕ್ಕೆರೆ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಿರುವ ಆಸ್ತಿ ಇಲ್ಲ. ಮಿಕ್ಕೆರೆ ಗ್ರಾಮದಿಂದ ಮರಿಗೌಡ ಬಡಾವಣೆಗೆ 20 ರಿಂದ 21 ಕಿ.ಮಿ ದೂರ ಇರಬಹುದು. ನಾನು ಮಿಕ್ಕೆರೆ ಗ್ರಾಮದಲ್ಲಿ 10 ವರ್ಷಗಳು ವಾಸ ಇದ್ದೆನು. ನಾನು ಕೊನೆಯದಾಗಿ ಮಿಕ್ಕೆರೆಯಲ್ಲಿ ವಾಸ ಇದ್ದುದ್ದು ಯಾವಾಗ ಎಂದರೆ ಸಾಕ್ಷಿಯು ಮಿಕ್ಕೆರೆಯನ್ನು ಬಿಟ್ಟು ಬಂದು 7 ವರ್ಷಗಳು ಆಗಿದೆ ಎಂದು ಉತ್ತರಿಸಿರುತ್ತಾರೆ. ದಿನಾಂಕ 30.09.2020 ರಂದು ನಾನು

ಮಿಕ್ಕೆರೆಯಲ್ಲಿ ವಾಸ ಇರಲಿಲ್ಲ.ನನ್ನನ್ನು ಆಸ್ಪತ್ರೆಗೆ ಕರೆದುಕೂಂಡು ಹೋಗಿದ್ದವರಿಗೆ, ನಾನು ಯಾವ ಊರಿನ ವಾಸಿ ಅಂತ ಗೊತ್ತಿತ್ತು. ಚಾಸಾ.1, ಚಾಸಾ.3 ಮತ್ತು 4 ರವರಿಗೆ ನಾನು ಮಿಕ್ಕೆರೆಯಲ್ಲಿ ವಾಸ ಇದಿದ್ದು ಗೊತ್ತಿತ್ತು ಎಂದರೆ ಸರಿ. ಚಾಸಾ.5 ಜಯಣ್ಣ ನನ್ನ ಆತ್ಮೀಯ ಸ್ನೇಹಿತ ಎಂದರೆ ಸಾಕ್ಷಿ ನಮ್ಮ ಊರಿನವರು ಎಂದು ಹೇಳುತ್ತಾರೆ. ನಾನು ಮಿಕ್ಕೆರೆಯಲ್ಲಿ ಇದ್ದಾಗ ಹಸುಗಳನ್ನು ಸಾಗಾಣಿಕೆ ಮಾಡಿಕೊಂಡು ಹಾಲಿನ ವ್ಯಾಪಾರ ಮಾಡುತ್ತಿದ್ದೆನು. ನಮ್ಮ ಕುಟುಂಬದ ಆಸ್ತಿಗೆ ಸಂಬಂಧಪಟ್ಟಂತೆ, 2003 ನೇ ಇಸವಿಯಿಂದ ವ್ಯಾಜ್ಯ ಇದೆ. ಇಂದಿಗೂ ಸಹಾ ಕೇಸು ನಡೆಯುತ್ತಿದೆ . 2003 ನೇ ಇಸವಿಯಲ್ಲಿ ನನ್ನ ಅಕ್ಕನಾದ ಲಕ್ಷ್ಮಮ್ಮನವರು ಆಸ್ತಿಯಲ್ಲಿ ಭಾಗ ಬೇಕು ಅಂತ ಕೇಸು ಹಾಕಿದ್ದರು. ಅವರು ಈಗ ಈ ಕೇಸಿನಲ್ಲಿ 5 ನೇ ಆರೋಪಿಯಾಗಿದ್ದಾರೆ. ಲಕ್ಷ್ಮಮ್ಮ ನವರು ಹಾಕಿದ್ದಂತ ಕೇಸಿನಲ್ಲಿ , ನ್ಯಾಯಾಲಯ ಅವರ ಪರ ತೀರ್ಪು ನೀಡಿತ್ತು ಎಂದರೆ ಸರಿ. ನಾನು ಲಕ್ಷ್ಮಮ್ಮನವರ ಮೇಲೆ ಯಾವುದೇ ಸಿವಿಲ್ ಕೇಸನ್ನು ಹಾಕಿರಲಿಲ್ಲ. ನ್ಯಾಯಾಲಯದಿಂದ ಲಕ್ಷ್ಮಮ್ಮ ನವರ ಪರ ತೀರ್ಪು ಬಂದ ಮೇಲೆ, ಆಸ್ತಿಯನ್ನು ವಿಭಾಗ ಮಾಡಲಿಲ್ಲ. ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ನಾನು ಅಪೀಲು ಹಾಕಿರುವುದಿಲ್ಲ. ಲಕ್ಷ್ಮಿಯವರ ನ್ಯಾಯಾಲಯಾದ ತೀರ್ಪಿನ ಪ್ರಕಾರ ಭಾಗ ಆಗಬೇಕುಂ ಅತ ಹೇಳಿ ನ್ಯಾಯಾಲಯದಲ್ಲಿ ಇನ್ನೊಂದು ಅರ್ಜಿಯನ್ನು ಹಾಕಿದ್ದರು ಎಂದರೆ ಸಾಕ್ಷಿಯು ಲಕ್ಷ್ಮಿಯವರು ಹಾಕಿರುವುದಿಲ್ಲ, ಬೇರೆಯವರು ಹಾಕಿದ್ದಾರೆ ಎಂದು ಹೇಳುತ್ತಾರೆ. ಒಟ್ಟು ಕುಟುಂಬದ ಆಸ್ತಿಯಲ್ಲಿ ಇಂತವರಿಗೆ ಇಂತಹ ಆಸ್ತಿ ಭಾಗ ಹೋಗಬೇಕು ಅಂತ ನಿರ್ಣಯ ಆಗಿಲ್ಲ ಎಂದರೆ ಸರಿ. ಸಿವಿಲ್ ವ್ಯಾಜ್ಯ ಇರುವಾಗಲೇ, ಮರಿಗೌಡ ಬಡಾವಣೆಯಲ್ಲಿ ಒಂದು ನಿವೇಶನವನ್ನು ಚಂದ್ರ ಅನ್ನುವವರಿಗೆ ನಾನು ಮಾರಾಟ ಮಾಡಿದ್ದೇನೆ ಎಂದರೆ ಸರಿ. ಮಾರಾಟ ಮಾಡಲು ನ್ಯಾಯಾಲಯದ ಅನುಮತಿಯನ್ನು ತೆಗೆದುಕೊಂಡಿರಲಿಲ್ಲ. 2007 ಇಸವಿಯಲ್ಲಿ ನಿವೇಶವನ್ನು ಮಾರಾಟ ಮಾಡಿದ ವಿಚಾರಕ್ಕೆ ಗಲಾಟೆ ಆಗಿತ್ತು. ನನ್ನ ಮತ್ತು ಆರೋಪಿಗಳ ನಡುವೆ FIR ಆಗಿರಲಿಲ್ಲ, ಚಂದ್ರ ಮತ್ತು ಆರೋಪಿಗಳ ನಡುವೆ FIR ಆಗಿತ್ತು. ಚಂದ್ರರವರನ್ನು ಸಿವಿಲ್ ವ್ಯಾಜ್ಯದಲ್ಲಿ ಯಾಕೆ ಪಾರ್ಟಿ ಮಾಡಿದರು ಎಂಬುವ ವಿಚಾರಕ್ಕೆ ಗಲಾಟೆ ಆಗಿತ್ತು ಎಂದರೆ ಸರಿ. ಒಟ್ಟು ಕುಟುಂಬದ ಆಸ್ತಿಯನ್ನು ಮರೆ ಮಾಚಿ , ಮಾರಾಟ ಮಾಡಿದ್ದೇನೆ ಅಂತ ಹೇಳಿ ಚಂದ್ರುರವರು ನನ್ನೊಂದಿಗೆ ಗಲಾಟೆ ಮಾಡಿದ್ದರು ಎಂದರೆ ಸಾಕ್ಷಿಯು ಗಲಾಟೆ ಮಾಡಿರಲಿಲ್ಲ ಕೇಸನ್ನು ಹಾಕಿದ್ದರು ಎಂದು ಹೇಳುತ್ತಾರೆ. 2007 ನೇ ಇಸವಿಯಲ್ಲಿ ಮಾರಾಟ ಮಾಡಿದ ಸಂದರ್ಬದಲ್ಲಿ ನಾನು ಮಿಕ್ಕೆರೆಯಲ್ಲಿ ವಾಸ ಇದ್ದೆನು ಎಂದರೆ ಸಾಕ್ಷಿಯು ಮಿಕ್ಕೆರೆಯಲ್ಲಿ ವಾಸ ಇರಲಿಲ್ಲ ಹೋಗಿ ಬಂದು ಮಾಡಿಕೊಂಡಿದ್ದೆನು ಎಂದು ಹೇಳುತ್ತಾರೆ. ಈಗ ನನಗೆ ತೋರಿಸಿದ ನಿಪಿ.9 ಮತ್ತು 10 ರಲ್ಲಿ ಇರುವ ಮನೆಯಲ್ಲಿ ನಾನು ದಿನಾಂಕ 30.09.2020 ರಂದು ವಾಸ ಇದ್ದೆನು ಎಂದರೆ ಸರಿ. ನಿಪಿ.9 ಮತ್ತು 10 ಫೋಟೋದಲ್ಲಿ ಕಾಣುತ್ತಿರುವ ಮನೆ ಆರೋಪಿಯ ಮನೆ . ನಿಪಿ.9 ಫೋಟೋದಲ್ಲಿ ಕೆಂಪು ಶರ್ಟು ಹಾಕಿಕೊಂಡಿರುವ ವ್ಯಕ್ತಿ ಯಾರು

ಎಂದು ಸರಿಯಾಗಿ ನನಗೆ ಕಾಣಿಸುತ್ತಿಲ್ಲ. ಕಾರಣ ನನ್ನ ಕಣ್ಣಿಗೆ ಮಂಜು ಆಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಫೋಟೋದಲ್ಲಿ ಕಾಣುತ್ತಿರುವ ಮನೆ ಸ್ಪಷ್ಟವಾಗಿ ಕಾಣುತಿದೆ, ಆದರೆ ಅದರಲ್ಲಿ ಕೆಂಪು ಟೀ ಶರ್ಟ್ ಹಾಕಿರುವ ವ್ಯಕ್ತಿಯು ನನಗೆ ಸರಿಯಾಗಿ ಕಾಣುತ್ತಿಲ್ಲ.

ನಿಪಿ.9 ಮತ್ತು 10 ಫೋಟೋದಲ್ಲಿ ಕಾಣುತ್ತಿರುವ ಮನೆಯಲ್ಲಿ ನಾನು ದಿನಾಂಕ 30.09.2020 ರಂದು ವಾಸ ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 30.09.2020 ಕ್ಕಿಂತ ಹಿಂದಿನ ದಿನಗಳಲ್ಲಿ ನಾನು ಮಿಕ್ಕೆರೆ ಗ್ರಾಮದಿಂದ ಬಂದು ,ಮರಿಗೌಡ ಬಡಾವಣೆಯ ಮನೆಯನ್ನು ರಿಪೇರಿ ಮಾಡಿಸಲು ಬಂದಿದ್ದೆನು ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಯಾವ ಯಾವ ಆಸ್ತಿ ಯಾರಿಗೆ ಹೋಗಬೇಕು ಅಂತ ಭಾಗ ಆಗದೆ ಇರುವುದರಿಂದ ರಿಪೇರಿಯನ್ನು ಮಾಡಿಸಬೇಡ ಎಂದು ಆರೋಪಿಗಳು ನನಗೆ ಹೇಳಿದ್ದರು ಎಂದರೆ ಸರಿ. ಈ ವಿಷಯವನ್ನು ಕೇಳುವುದಕ್ಕೆ ಬಂದಿದ್ದಾಗ ನಾನು 1 ನೇ ಆರೋಪಿ ಶಂಕರ್ ರವರಿಗೆ ದೊಣ್ಣೆಯಿಂದ ತಲೆಗೆ ಹೊಡೆದಿದ್ದೆನು ಎಂದರೆ ಸರಿಯಲ್ಲ. ನನ್ನ ಮಗ ತಿರುಮಲ, 1 ನೇ ಆರೋಪಿಗೆ ಕುಡುಗೋಲಿನಿಂದ ಭುಜಕ್ಕೆ ಹೊಡೆದಿದ್ದ ಎಂದರೆ ಸರಿಯಲ್ಲ. ಆ ವಿಚಾರವಾಗಿ ನಡೆದಂತ ಗಲಾಟೆಯಲ್ಲಿ ಒಬ್ಬರಿಗೊಬ್ಬರಿಗೆ ತಳ್ಳಾಟವಾಗಿ ನಾನು ಕಲ್ಲಿನ ಮೇಲೆ ಬಿದಿದ್ದೆನು ಎಂದರೆ ಸರಿಯಲ್ಲ. ನಾನು ಕಲ್ಲಿನ ಮೇಲೆ ಬಿದಿದ್ದಾಗ ನನ್ನ ತಲೆಗೆ ಗಾಯ ಆಗಿತ್ತು ಎಂದರೆ ಸರಿಯಲ್ಲ. ನಾನು ಹೇಳಿದಂತೆ , ಮಹಡಿ ಮೇಲಿನಿಂದ 1 ನೇ ಆರೋಪಿ ಶಂಕರ, ತಾರಸಿ ಮೇಲಿಂದ ನನ್ನ ತಲೆ ಮೇಲೆ ಯಾವುದೇ ದಿಂಡು ಕಲ್ಲನ್ನು ಎತ್ತಿ ಹಾಕಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಾದ ಭಾಗ್ಯ, ಲಕ್ಷ್ಮಿ, ಗೀತಾರವರು ಕುಡುಗೋಲಿನಿಂದ ನನ್ನ ಬಲ ಕಪಾಲದ ಮೇಲೆ ಮತ್ತು ಬಲ ಕಣ್ಣಿನ ಮೇಲೆ ಹೊಡೆದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಾದ ಶ್ರೀ ನಿಧಿ ಮತ್ತು ಸಿದ್ದಪ್ಪರವರು ದೊಣ್ಣೆಯಿಂದ ನನಗೆ ಹಲ್ಲೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಬಿದ್ದು ಗಾಯವಾಗಿದ್ದನ್ನು ಉಪಯೋಗಿಸಿಕೊಂಡು, ಆರೋಪಿಗಳಾದ ಭಾಗ್ಯ, ಲಕ್ಷ್ಮಿ ಮತ್ತು ಗೀತಾರವರು ಆಸ್ತಿಯಲ್ಲಿ ಭಾಗವನ್ನು ಕೇಳಬಾರದು ಅಂತ ಹೇಳಿ ನಾನು ಇವರ ಮೇಲೆ ಸುಳ್ಳು ದೂರನ್ನು ಕೊಡಿಸಿದ್ದೇನೆ ಎಂದರೆ ಸರಿಯಲ್ಲ. ಈ ಕಾರಣಕ್ಕಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ತೀರ್ಪು ನೀಡಿದ ನಂತರ, ಊರಿನಲ್ಲಿ ಯಾವುದೇ ಪಂಚಾಯಿತಿ ಆಗಲಿಲ್ಲ. ನ್ಯಾಯಾಲಯದ ತೀರ್ಪಿನ ಪ್ರಕಾರ ನಾನು ಇಂತಹ ಭಾಗಗಳನ್ನು ಕೊಡುತ್ತೇನೆ ಅಂತ ಹೇಳಲಿಲ್ಲ. ಇಡೀ ಒಟ್ಟು ಕುಟುಂಬದ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ </u>ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.